4RR 154ಪ್ರ 6 118 ನಿ=72

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ಸೂಚನೆ:**

ಐ.ಎ.ಎಸ್ ಅಧಿಕಾರಿಯೋರ್ವರು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ (ಎಟಿಐ) ಅತಿಥಿ ಗೃಹದಲ್ಲಿ ವಾಸ್ತವ್ಯವಿದ್ದು, ಅತಿಥಿಗೃಹ ಖಾಲಿ ಮಾಡುವಾಗ ಅಲ್ಲಿದ್ದ ಸರಕಾರಿ ಪೀಠೋಪಕರಣಗಳು ಮತ್ತು ವಸ್ತುಗಳು ನಾಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದ್ದಂತೆ ಅಧಿಕಾರಿಗೆ ಬರೆದ ಪತ್ರಗಳಿಗೆ ಸ್ಪಂದಿಸದೆ ನಿರ್ಲಕ್ಷ ವಹಿಸಿದ್ದಲ್ಲದೆ, ಪ್ರಾಥಮಿಕ ತನಿಖೆಯಲ್ಲೂ ವಸ್ತುಗಳು ಪತ್ತೆಯಾಗದೆ ನಾಪತ್ತೆಯಾಗಿರುವುದು ಕಂಡುಬಂದಿರುತ್ತದೆ. ಸರಕಾರದ ಪೀಠೋಪಕರಣ ನಾಪತ್ತೆ ಪ್ರಕರಣದಲ್ಲಿ ತಪ್ಪಿತಸ್ಥ ಐ.ಎ.ಎಸ್ ಅಧಿಕಾರಿ ನಷ್ಟ ಪಾವತಿಸದೇ, ಬೇರೊಬ್ಬ ಅಧಿಕಾರಿ ನಷ್ಟ ಪಾವತಿಸಿ ಸತ್ಯಂಶ ಮರೆಮಾಚಿರುವ ಪ್ರಕರಣದ ಬಗ್ಗೆ ನಿಯಮ 72 ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಸರ್ಕಾರದ ಉತ್ತರ:**

ಜಂಟಿ ನಿರ್ದೇಶಕು (ಆಡಳಿತ), ಆಡಳಿತ ತರಬೇತಿ ಸಂಸ್ಥೆ, ಮೈಸೂರು ರವರಿಂದ ದಿನಾಂಕ: 11.08.2023 ರಂದು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹದಲ್ಲಿ ಸಾಮಾಗ್ರಿಗಳು ನಾಪತ್ತೆಯಾಗಿರುವ ಬಗ್ಗೆ ಪತ್ರ ಸ್ವೀಕೃತವಾಗಿದ್ದು, ಈ ಕುರಿತು ಸಂಬಂಧಪಟ್ಟ ಭಾ.ಆ.ಸೇ., ಅಧಿಕಾರಿಯವರಿಂದ ದಿನಾಂಕ: 23.07.2024 ರಂದು ವಿವರಣೆ ನೀಡುವಂತೆ ಕೋರಲಾಗಿರುತ್ತದೆ ಹಾಗೂ ಸದರಿ ಅಧಿಕಾರಿಯವರು ದಿನಾಂಕ: 24.07.2024 ರಂದು ವಿವರಣೆಯನ್ನು ನೀಡಿರುತ್ತಾರೆ.

ಸದರಿ ವಿವರಣೆಯನ್ನು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿಗೆ ಕಳುಹಿಸಲಾಗಿ ತಮ್ಮ ಅಭಿಪ್ರಾಯ ನೀಡಬೇಕೆಂದು ಕೋರಲಾಗಿರುತ್ತದೆ.

ಅದರಂತೆ ಆಡಳಿತ ತರಬೇತಿ ಸಂಸ್ಥೆಯು ದಿನಾಂಕ: 07.11.2024 ರಂದು ವರದಿಯನ್ನು ಸಲ್ಲಿಸಿದ್ದು, ಈ ವರದಿಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ: ಸಿಆಸುಇ 258 ಎಸ್‌ಇಸಿ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ